ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ನವನಗರ, ಬಾಗಲಕೋಟ-02

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, Navanagar, Bagalkot-02

Tel: 08354/297330, Mob No- 9449877676
E-mail ID: seebgkt.hescom@gmail.com
dcabgkt.hescom@gmail.com
Corporate Identity Number(CIN): U31401KA2002SGC030437

ಕ್ರ.ಸಂ:ಹುವಿಸಕಂ/ಅಇಂ(ವಿ)/ಉಲೆನಿ/ಸಲೆ/ಹಿಸ-1/2020-21/4145-4149 ದಿನಾಂಕ: 12 AUG 2021

ದಿನಾಂಕ: 15.07.2021 ರಂದು ಬೆಳಗ್ಗೆ 11.30 ಘಂಟೆಗೆ ಶ್ರೀ ಕಾಶೀನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟರವರ ಅಧ್ಯಕ್ಷತೆಯಲ್ಲಿ ಬಾಗಲಕೋಟ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

<u>ಪ್ರಕರಣ ಸಂಖ್ಯೆ: 07/2020</u>

GTL Infrastructure Limited, ನಂದವಾಡಗಿ,
ಪ್ರತಿನಿಧಿ: ಶ್ರೀ. ಮುನಿಯಪ್ಪ ಮ್ಯಾನೇಜರ್. --------ದೂರುದಾರರು.

ವಿರುದ್ಧ

ಸಹಾಯಕಕಾರ್ಯನಿರ್ವಾಹಕಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಹುವಿಸಕಂನಿ., -------- ಪ್ರತಿವಾದಿ
ಇಲಕಲ್ಲ.

ವಿಷಯ: "Registering of grievance against impugned letter No: ILKAL/AEE(ELE)/O&M/2020-21/1797 DATED:21st OCT 2020 for demamanding deficit payment of Rs.1,35,042/- as against the claimed bearing RR No: NWG-39205 in respect of nandavadagi site."

*&*&*

ಪ್ರಕರಣ ಸಂಖ್ಯೆ: 7/2020ರಕ್ಕೆ ಸಂಬಂಧಿಸಿದಂತೆ, ದಿನಾಂಕ:15.03.2021ರಂದುಬೆಳಗ್ಗೆ 11.30 ಘಂಟೆಗೆ ಶ್ರೀ **ಕಾಶೀನಾಥ. ಹಿರೇಮಠ**, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತಕಛೇರಿ, ಹೆಸ್ಕಾಂ ಬಾಗಲಕೋಟರವರು ಸಭೆಗೆ ಹಾಜರಿದ್ದಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:** 1)ಶ್ರೀ ನಾರಾಯಣ ಕಳ್ಳಿಮನಿ, ಕಾರ್ಯನಿರ್ವಾಹಕಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟ.

2) ಸಹಾಯಕಕಾರ್ಯನಿರ್ವಾಹಕಅಭಿಯಂತರರು(ವಿ), ಕಾ & ಪಾ ಉಪವಿಭಾಗ ಹೆಸ್ಕಾಂ, ಇಲಕಲ್ಲ.
3) ಸಹಾಯಕ ಲೆಕ್ಕಾಧಿಕಾರಿ ಕಾ & ಪಾ ಉಪವಿಭಾಗ ಹೆಸ್ಕಾಂ, ಇಲಕಲ್ಲ
4) GTL Infrastructure Limited, ನಂದವಾಡಗಿ, ರವರ ಪ್ರತಿನಿಧಿಶ್ರೀ. ಮುನಿಯಪ್ಪ ಮ್ಯಾನೇಜರ್.

ಪೀಠಿಕೆ:

1) ಈ ಕಛೇರಿಆದೇಶ ಸಂಖ್ಯೆ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2020-21/16239-42 ದಿನಾಂಕ:02.03.2021ರಲ್ಲಿಸಹಾಯಕ ಕಾರ್ಯನಿರ್ವಾಹ ಕಅಭಿಯಂತರರು(ವಿ), ಕಾ & ಪಾ ಉಪವಿಭಾಗ ಹೆಸ್ಕಾಂ, ಇಲಕಲ್ಲ.ಹಾಗೂ ಶಾಖಾಧಿಕಾರಿ ಕಾ ಮತ್ತು ಪಾ ಶಾಖೆ ಹೆಸ್ಕಾಂ, ನಂದವಾಡಗಿ.ರವರಿಗೆ ಮುಂದಿನ ಸಭೆಯಲ್ಲಿ ಮಾಪಕ ಬದಲಾವಣೆ ಮಾಡಿರುವ ಕುರಿತು ವಿವರವಾದ ಮಾಹಿತಿಯೊಂದಿಗೆ ಸಭೆಗೆ ಹಾಜರಾಗಲು ಸೂಚಿಸಿದೆ. ಸದರಿ ಗ್ರಾಹಕರು ಮಾಪಕ ಬದಲಾವಣೆ ಮಾಡಿರುವ ಬಗ್ಗೆ ಮುಂದಿನ ಸಭೆಯಲ್ಲಿ ಸೂಕ್ತ ದಾಖಲೆಗಳನ್ನು ಸಭೆಯನ್ನು ಮುಂದುಡಲಾಗಿತ್ತು.

2) ಈ ಕಛೇರಿಆದೇಶ ಸಂಖ್ಯೆ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2020-21/ 17242-47 ದಿನಾಂಕ:25.03.2021 ರಲ್ಲಿ ಕಾರ್ಯನಿರ್ವಾಹಕ ಇಂಜನೀಯರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆರವರಿಗೆ ಸದರಿ ಸ್ಥಾವರಕ್ಕೆ ಸಂಬಂಧಿಸಿದ ಡಿ.ಟಿ.ಸಿ ಮಾಪಕದಲ್ಲಿ ಅಕ್ಟೋಬರ್-2015 ರಿಂದ ಜುಲೈ-2018ರ ವರೆಗಿನ ದಾಖಲಾದ ರೀಡಿಂಗ್ ಮಾಹಿತಿಯ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಿ ಸಭೆಯನ್ನು ಮುಂದುಡಲಾಗಿತ್ತು.

**GTL Infrastructure Limited, ನಂದವಾಡಗಿ, ಪ್ರತಿನಿಧಿ: ಶ್ರೀ. ಮುನಿಯಪ್ಪ ಮ್ಯಾನೇಜರ್.**

ಅಕ್ಟೋಬರ್-2015 ರಿಂದ ಜುಲೈ-2018 ರವರೆಗೆ ವಿದ್ಯುತ್ ಬಳಕೆ ಮಾಡಿರುವುದಿಲ್ಲ. ಹಾಗೂ ಪ್ರತಿ ತಿಂಗಳು ತಮ್ಮ ಇಲಾಖಾ ಸಿಬ್ಬಂದಿಯವರು ಬಿಲ್ಲಿನಲ್ಲಿ "ವೆಕೆಂಟ್" ಎಂದು ನಮೂದಿಸಿ ಬಿಲ್ಲನ್ನು ವಿತರಿಸಿದ್ದು, ಅದರಂತೆ ಪ್ರತಿ ತಿಂಗಳು ನಿಗಧಿತ ಶುಲ್ಕವನ್ನು ಭರಣಾ ಮಾಡಿದ್ದುಇರುತ್ತದೆ. ಸಹಾಯಕಕಾರ್ಯನಿರ್ವಾಹಕಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಇಲಕಲ್ಲರವರ ಪತ್ರ ಸಂಖ್ಯೆ:1797 ದಿನಾಂಕ:21.10.2020 ರಲ್ಲಿ ರೂ.1,35,042/- ಗಳನ್ನು ಭರಣಾ ಮಾಡಲು ತಿಳಿಸಿದ್ದು, ಮುಂದುವರೆದು ದಿನಾಂಕ:21.11.2020 ರಂದು ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದು, ಮತ್ತುಎಂ.ಆರ್.ಟಿ ಉಪ-ವಿಭಾಗ ಹೆಸ್ಕಾಂ, ಬಾಗಲಕೋಟೆ.ರವರು ಬಂದು ಮಾಪಕ ಪರಿಶೀಲಿಸಿ ಮಾಪಕದೋಷಇರುವುದರಿಂದ ಮಾಪಕ ಬದಲಾವಣೆ ಮಾಡಿಕೊಳ್ಳಲು ಸೂಚಿಸಿದರು.

ಪೀಠಿಕೆ-1 ರಲ್ಲಿ ಆದೇಶಿಸಿರುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಇಲಕಲ್ಲ ಶಾಖಾಧಿಕಾರಿಕಾ ಮತ್ತು ಪಾ ಶಾಖೆ ಹೆಸ್ಕಾಂ, ನಂದವಾಡಗಿರವರು ಮಾಪಕ ಬದಲಾವಣೆ ಮಾಡಿರುವ ಬಗ್ಗೆ ಸಭೆಯಲ್ಲಿ ಸೂಕ್ತ ದಾಖಲೆಗಳನ್ನು ಮಂಡಿಸಿರುವರು.

ಪೀಠಿಕೆ-2 ರಲ್ಲಿ ಕಾರ್ಯನಿರ್ವಾಹಕಇಂಜನೀಯರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆರವರಿಗೆ ಸದರಿ ಸ್ಥಾವರಕ್ಕೆ ಸಂಬಂಧಿಸಿದ ಡಿ.ಟಿ.ಸಿ ಮಾಪಕದಲ್ಲಿ ಅಕ್ಟೋಬರ್-2015 ರಿಂದ ಜುಲೈ-2018ರ ವರೆಗಿನ ದಾಖಲಾದ ರೀಡಿಂಗ್ ಮಾಹಿತಿಯ ವರದಿಯನ್ನು ಮುಂದಿನ ಸಭೆಯಲ್ಲಿ

ಮಂಡಿಸಲು ಸೂಚಿಸಲಾಗಿತ್ತು ಆದರೆ ಸಹಾಯಕ 'ಕಾರ್ಯನಿರ್ವಾಹಕ ಇಂಜನೀಯರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಇಲಕಲ್ಲ ವರದಿಯನ್ನು ವೇದಿಕೆಗೆ ಮಂಡಿಸದೆ ಸಭೆಗೆ ಗೈರು ಹಾಜರಾಗಿದ್ದು

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ & ಪಾ ಉಪವಿಭಾಗ ಹೆಸ್ಕಾಂ, ಇಲಕಲ್ಲ. ರವರ ಹೇಳಿಕೆ:**

**ಪತ್ರ ಸಂಖ್ಯೆ:ಇಲಕಲ್ಲ/ಸಕಾನಿಇಂ(ವಿ)/ಸಲೆ/ಕ- /404-06 ದಿನಾಂಕ:03.05.2021** ರನ್ವಯ GTL Infrastructure Limited,ರವರು NWG-39205ರ ಸ್ಥಾವರಕ್ಕೆಆಂತರಿಕ ಪರಿಶೋಧನೆಯಿಂದ ಅಕ್ಟೋಬರ್-2015 ರಿಂದ ಜುಲೈ-2018 ರ ವರೆಗೆ ಹಿಂಬಾಕಿ ಬಿಲ್ಲು ರೂ.1,35,042/- ಮಾಡಲಾಗಿರುತ್ತದೆ. ಸದರಿ ವಿಷಯಕುರಿತಾಗಿGTL Infrastructure Limited,ರವರುCGRFಗೆ ಮನವಿ ಪತ್ರ ಸಲ್ಲಿಸಿರುತ್ತಾರೆ.ಉಲ್ಲೇಖಿತ ಪತ್ರ 2 ರನ್ವಯ ಮಾನ್ಯ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಕಾ ಮತ್ತು ಪಾ ವೃತ್ತ, ಹುವಿಸಕಂನಿ ಬಾಗಲಕೋಟೆ ರವರು ಸದರಿ ವಿಷಯ ಚರ್ಚಿಸಲು ಸಭೆಯ ನಿಗದಿಪಡಿಸಿ ಉಲ್ಲೇಖಿತ ಪತ್ರ (3) ರನ್ವಯ ಸಭೆಯಲ್ಲಿ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ವಿಭಾಗ ಹುವಿಸಕಂನಿ ಬಾಗಲಕೋಟೆರವರಿಗೆ ಸದರಿ ಸ್ಥಾವರಕ್ಕೆ ಸಂಬಂಧಿಸಿದ ಡಿ.ಟಿ.ಸಿ ಮಾಪಕದಲ್ಲಿ ಅಕ್ಟೋಬರ್-2015 ರಿಂದ ಜುಲೈ-2018ರ ವರೆಗಿನ ದಾಖಲಾದ ರೀಡಿಂಗ್ ಮಾಹಿತಿಯ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಿರುವ ಮೇರೆಗೆ ಕಾರ್ಯನಿರ್ವಾಹಕ ಅಭಿಯಂತರರು(ವಿ) ಸದರಿ ವಿಷಯವಾಗಿ ಮೌಖಿಕ ನಿರ್ದೇಶನ ನೀಡಿರುವ ಮೇರೆಗೆ ಈ ಕೆಳ ಸಹಿದಾರರು ಶಾಖಾಧಿಕಾರಿಗಳು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)ಎಲ್.ಟಿ.ಎಮ್.ಆರ್ ಉಪ-ವಿಭಾಗ ಹೆಸ್ಕಾಂ ಬಾಗಲಕೋಟೆರವರೊಂದಿಗೆ ಸ್ಥಳ ಪರಿಶೀಲನೆ ಮಾಡಿದಾಗ ಪರಿವರ್ತಕ ಮಾಪಕದಲ್ಲಿ ಡಿಸ್ಲೆ ಇರುವುದಿಲ್ಲ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)ಎಲ್.ಟಿ.ಎಮ್.ಆರ್ ಉಪ-ವಿಭಾಗ ಹೆಸ್ಕಾಂ ಬಾಗಲಕೋಟೆರವರು ಡಿಸ್ಲೆ ಇಲ್ಲದಿರುವದರಿಂದ ಡೇಟಾಡೌನ್ ಲೋಡ್ ಸಾಧ್ಯವಾಗುವುದಿಲ್ಲವೆಂದು ತಿಳಿಸಿರುತ್ತಾರೆ.

ಸದರಿ ವಿಷಯವಾಗಿ ಡಿ.ಟಿ.ಸಿ ಅಳವಡಿಸಿರುವ Agency:AsianFabtech Limited, Bangalore ರವರ ಪ್ರತಿನಿಧಿಯಾದ ಶ್ರೀ ಶ್ರೀನಾಥ ಮೊ:9611186800 ರವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿ ಮಾಹಿತಿಯನ್ನು ಒದಗಿಸಲು ತಿಳಿಸಿದಾಗ ಸದರಿಯವರು ಅಕ್ಟೋಬರ್-2015 ರಿಂದ ಜುಲೈ-2018 ರ

ವರೆಗೆ ಮಾಹಿತಿಯು ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ವಿಷಯವನ್ನು ದಯಾಪರರ ಮಾಹಿತಿಗಾಗಿ ಸಲ್ಲಿಸಿದೆ. ಎಂದು ತಿಳಿಸಿರುತ್ತಾರೆ.

ಜೂನ್-2018 ರಿಂದ ಮಾಪಕ ಬದಲಾವಣೆಯಾಗಿದ್ದು, ಜೂನ್-2018 ರಿಂದ 6 ತಿಂಗಳ ಬಳಕೆ ಆದಾರದ ಮೇಲೆ ಸರಾಸರಿ 943 ಯುನಿಟ್‌ಗಳಂತೆ ಜನೇವರಿ-2017 ರಿಂದ ಮಾರ್ಚ-2018 ರವರೆಗೆ 0 ಬಳಕೆ ಆಗಿರುವದಕ್ಕೆ ಲೆಕ್ಕಾಧಿಕಾರಿ(ಆಂ.ಪ), ವಿಭಾಗಕಛೇರಿ ಹೆಸ್ಕಾಂ, ಬಾಗಲಕೋಟೆರವರು ಲೆಕ್ಕಪರಿಶೋಧನೆ ಮಾಡಿ ಕಂದಾಯ ಕೊರತೆ ರೂ.1,35,042/-ಗಳು ಬಂದಿದ್ದು, ಸದರಿ ಮೊತ್ತವನ್ನು ಪಾವತಿಸಲು ಸದರಿ ಗ್ರಾಹಕರಿಗೆ ತಿಳಿಸಿರುವ ಕುರಿತು ಗ್ರಾಹಕರು ಗ್ರಾಹಕರ ಕುಂದು ಕೊರತೆ ನಿವಾರಣೆ ವೇದಿಕೆಯಲ್ಲಿ ( **CGRF)** ಪ್ರಕರಣವನ್ನು ಧಾಖಲಿಸಿರುತ್ತಾರೆ.

ಸದರೀ ವಿಷಯದ ಕುರಿತು ಈಗಾಗಲೇ ಹಿಯರಿಂಗ್ ಸಭೆಯನ್ನು ನಡೆಸಲಾಗಿ, ಸಭೆಯಲ್ಲಿ GTL infrastructure limited., ನಂದವಾಡಗಿ ಇವರ ಪ್ರತಿನಿಧಿ ಮ್ಯಾನೇಜರ್ ಶ್ರೀ ಮುನಿಯಪ್ಪ ಇವರ ಹೇಳಿಕೆಗಳನ್ನು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಇಲಕಲ್ಲ ರವರ ಹೇಳಿಕೆಯನ್ನು ಹಾಗೂ ವರದಿಗಳನ್ನು ಪರಿಶೀಲಿಸಲಾಗಿ ಕಂಡುಬರುವದೇನೆಂದರೆ

1. ಗ್ರಾಹಕರು ಮಾಪಕವನ್ನು ಸರಿಯಾದ ಸ್ಥಳದಲ್ಲಿ ಅಳವಡಿಸಿರುವದಿಲ್ಲ ಹಾಗೂ ಮಾಪಕ ಭದ್ರತೆ ಕುರಿತು ಕ್ರಮ ಕೈಗೂಂಡಿರುವದಿಲ್ಲ.
2. ಗ್ರಾಹಕರು ಉಪಯೋಗ ಮಾಡದ ಕುರಿತು ಯಾವುದೇ ಅರ್ಜಿ ಸಲ್ಲಿಸಿರುವದಿಲ್ಲ.
3. ಉಪಯೋಗವಿಲ್ಲದಿದ್ದರೆ ಸ್ಥಾವರವನ್ನು ಸ್ಥಗಿತಗೊಳಿಸಲು(Temp Diss-conn) ಅರ್ಜಿ ಸಲ್ಲಿಸಿರುವದಿಲ್ಲ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಇಲಕಲ್ಲ ಇವರು ಸವರಿ ಸ್ಥಾವರಕ್ಕೆ ಸಂಬಂಧಿಸಿದ DTC ಮಾಪಕದಲ್ಲಿ ಅಕ್ಟೋಬರ-2015 ರಿಂದ ಜುಲೈ-2018 ರ ವರೆಗಿನ ದಾಖಲಾದ ರೀಡಿಂಗ ಮಾಹಿತಿಯನ್ನು ತರಲು ವಿಫಲರಾಗಿರುತ್ತಾರೆ.
5. ಶಾಖಾಧಿಕಾರಿಗಳು/ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಬಾಗ ಹೆಸ್ಕಾಂ ಇಲಕಲ್ಲ ಇವರು meter MNR ಆದ 3 ತಿಂಗಳ ಒಳಗಾಗಿ ಮಾಪಕವನ್ನು ಎಲ್.ಟಿ.ಎಮ್.ಆರ್ ಬಾಗಲಕೋಟ ಅವರಿಂದ ಮಾಪಕವನ್ನು ಪರಿಶೀಲಿಸಿ ಬದಲಾವಣೆ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿರುತ್ತಾರೆ.
6. ಮಾಪಕದಲ್ಲಿ ಡಿಸಪ್ಲೇ ಇಲ್ಲದಿರಲು ಕುರಿತು ವರದಿ ನೀಡುವಲ್ಲಿ ಸಂಬಂಧಿಸಿದ ಮಾಪಕ ಓದುಗ/ಜಿವಿಪಿ ಗಳು ಸಂಬಂಧಿಸಿದ ಶಾಖಾಧಿಕಾರಿಗಳು ಕ್ರಮ ಕೈಗೊಂಡಿರುವುದಿಲ್ಲ.

ಈ ಎಲ್ಲ ವಿಷಯಗಳನ್ನು ಅವಲೋಕಿಸಲಾಗಿ ಹಾಗೂ ವಾದಿ ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಿ, ಈ ವಿಷಯದಲ್ಲಿ ಎರಡು ಕಡೆ ನಿರ್ಲಕ್ಷ್ಯತನ ಕಂಡುಬಂದಿರುತ್ತದೆ. ಮಾನ್ಯ ವೇದಿಕೆಯು ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

## : ಆದೇಶ :

ಪ್ರಕರಣ ಸಂಖ್ಯೆ-07/2020 ಗೆ ಸಂಬಂಧಿಸಿದ GTL infrastructure limited., ನಂದವಾಡಗಿ ಇವರ ಸ್ಥಾವರ ಸಂಖ್ಯೆ: ಎನ್.ಡಬ್ಲ್ಯು.ಎನ್-39205 ಗೆ ಬೇಡಿಕೆ ಮಾಡಲಾದ ಆಂತರಿಕ ತನಿಖೆ ಕಂದಾಯ ಕೊರತೆ ಮೊತ್ತ ರೂ. 1,35,042=00 ರಲ್ಲಿ 50% ಗ್ರಾಹಕರು ಹಾಗೂ ಉಳಿದ 50% ಹುವಿಸಕಂನಿ ಸದರಿ ಈ ವಿಷಯಕ್ಕೆ ಸಂಬಂಧಿಸಿದ ಹಾಗೂ ಈ ಅವದಿಯಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿಗಳಿಂದ ಭರಣಾ ಮಾಡಿಸಲು ಆದೇಶಿಸಲಾಗಿದೆ

ಶ್ರೀ ಎಸ್ ಜಿ ಸಾತಿಹಾಳ
ಪ್ರಭಾರ ಉಪ ಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ
ಸದಸ್ಯರು, ಬಾಗಲಕೋಟ.

ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟ.

ಅಧ್ಯಕ್ಷರು,
(ಕಾಶೀನಾಥ.ಜಿ ಹಿರೇಮಠ,)
ಅಧೀಕ್ಷಕಅಭಿಯಂತರರು(ವಿ)ಬಾಗಲಕೋಟ ಹಾಗೂ ಗ್ರಾಹಕರ
ಕುಂದುಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟ.

ಪ್ರತಿಯನ್ನು:

1) ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟ ರವರ ಮಾಹಿತಿಗಾಗಿ. ಹಾಗೂ ರೂ 135042=00 ಮೊತ್ತದಲ್ಲಿ ಶೇ 50% ಮೊತ್ತವನ್ನು ಸಂಬಂದಪಟ್ಟ ಅಧಿಕಾರಿಗಳಿಂದ ವಸೂಲಾತಿ ಕ್ರಮ ಕೈಗೊಂಡು ವರದಿ ಸಲ್ಲಿಸುವದು. ಹಾಗೂ ಸಂಬಂದಪಟ್ಟ ಅಧಿಕಾರಿಗಳಿಂದ ಈ ಅವದಿಯಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿಗಳ ವಿವರಣೆ ಪಡೆದು ಅಧೀಕೃತ ಜ್ಞಾಪನಾ ಪತ್ರ ಹೊರಡಿಸಿ ವಸೂಲಾತಿಗೆ ಕ್ರಮ ಕೈಗೊಂಡು ವರದಿಯನ್ನು ಈ ಕಛೇರಿಗೆ ಅನುಸರಣೆ ಮಾಡಲು ಸೂಚಿಸಿದೆ.
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಇಲಕಲ್ಲ ರವರ ಮಾಹಿತಿಗಾಗಿ.
5) ಶಾಖಾಧಿಕಾರಿ ಕಾ ಮತ್ತು ಪಾ ಶಾಖೆ ಹೆಸ್ಕಾಂ, ನಂದವಾಡಗಿ.
6) GTL Infrastructure Limited, ನಂದವಾಡಗಿ, ಪ್ರತಿನಿಧಿ: ಶ್ರೀ. ಮುನಿಯಪ್ಪ ಮ್ಯಾನೇಜರ್.